ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಮಾನ್ಯ ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ ದಿನಾಂಕ : DATE : 30/07/2019

# ನಾವು ನುಡಿ ಜಾಣರು, ಹೃದಯವಂತರಲ್ಲ

## 'ಸ್ಪೀಕರ್' ಹುದ್ದೆಯಿಂದ ನಿರ್ಗಮನಕ್ಕೂ ಮುನ್ನ ಮನಸೂರೆಗೊಂಡ ರಮೇಶ್ ಸ್ಪೀಚ್

**ವಿಕ ಸುದ್ದಿಲೋಕ** ಬೆಂಗಳೂರು

ನಿರೀಕ್ಷೆಯಂತೆ ವಿಧಾನಸಭಾಧ್ಯಕ್ಷ ಸ್ಥಾನಕ್ಕೆ ಕೆ.ಆರ್.ರಮೇಶ್ ಕುಮಾರ್ ಸೋಮವಾರ ರಾಜೀನಾಮೆ ಸಲ್ಲಿಸಿದ್ದಾರೆ.

ಸಿಎಂ ಯಡಿಯೂರಪ್ಪ ಮಂಡಿಸಿದ್ದ ವಿಶ್ವಾಸಮತ ನಿರ್ಣಯ ಹಾಗೂ ಧನ ವಿನಿಯೋಗ ವಿಧೇಯಕಕ್ಕೆ ವಿಧಾನಸಭೆಯ ಒಪ್ಪಿಗೆ ದೊರೆಯುತ್ತಿದ್ದಂತೆ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಆದರೆ ಈ ನಿರ್ಣಯ ಪ್ರಕಟಣೆಗೂ ಮುನ್ನ ಸ್ಪೀಕರ್ ಸ್ಥಾನದಿಂದ ಆಡಿದ ಅವರ ಮಾತುಗಳು ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ.

ಪಕ್ಷಾಂತರ ನಿಷೇಧ ಕಾಯಿದೆ ಬಲಪಡಿಸುವಿಕೆ ಹಾಗೂ ಚುನಾವಣಾ ವ್ಯವಸ್ಥೆ ಸುಧಾರಣೆ ಬಗ್ಗೆ ರಾಜ್ಯ ವಿಧಾನ ಮಂಡಲದಲ್ಲಿ ನಿರ್ಣಯ ತೆಗೆದುಕೊಂಡು ಕೇಂದ್ರ ಸರಕಾರಕ್ಕೆ ಕಳುಹಿಸಿಕೊಡಬೇಕೆಂಬ ಪ್ರಸ್ತಾಪದ ಬಗ್ಗೆ ಸಾರ್ವಜನಿಕ ವಲಯದಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ.



ರಾಜೀನಾಮೆ ಬಳಿಕ ರಮೇಶ್ ಕುಮಾರ್ ನಿರ್ಗಮನ.

### ಮರೆಯಲಾಗದ ಸಪ್ತ ಸೊಲ್ಲುಗಳು

- ಈ ದೇಶದ ಭ್ರಷ್ಟಾಚಾರ ವ್ಯವಸ್ಥೆಯ ಮೂಲ ಚುನಾವಣೆಯಲ್ಲಿದೆ. ಚುನಾವಣಾ ವ್ಯವಸ್ಥೆ ಸುಧಾರಣೆಯಾಗಬೇಕೆಂಬುದು ಕಾಟಾಚಾರಕ್ಕೆ ಸೀಮಿತವಾಗಿದೆ. ಅದರ ಬಗೆಗಿನ ನಮ್ಮ ಮಾತು ಜಾಣತನದ್ದೇ ವಿನಃ ಹೃದಯದಿಂದ ಬರುವುದಲ್ಲ.
- ಚುನಾವಣೆ ವ್ಯವಸ್ಥೆ ಸುಧಾರಣೆಗೆ ಬಜೆಟ್ ಬೇಡ, ಮನಸ್ಸು ಬೇಕು, ಶ್ರೀ ಸಾಮಾನ್ಯನೂ ಚುನಾವಣೆಯಲ್ಲಿ ಭಾಗಿಯಾಗುವಂತಾಗಬೇಕು. ಸಾಂಸ್ಥಿಕವಾದ ರಾಜಕೀಯ ಪಕ್ಷಗಳು ವೈಯಕ್ತಿಕ, ಕೌಟುಂಬಿಕ ರೂಪ ಪಡೆಯುತ್ತಿವೆ.
- ಸಂವಿಧಾನದ 10ನೇ ಅನುಚ್ಛೇದದ ಅನುಸಾರ ಶಾಸಕರ ಅನರ್ಹತೆಗೊಳಿಸುವ ಮೂಲಕ ಇತಿಹಾಸ ನಿರ್ಮಾಣ ಮಾಡಿದ್ದೇನೆ ಎಂಬ ಭ್ರಮೆ ನನಗಿಲ್ಲ. ಆದರೆ ಈ ಕಾಯಿದೆಗೂ ಹೊಸ ನೋಟ ಕೊಡುವ ಅಗತ್ಯವಿದೆ. ಜತೆಗೆ ಪ್ರಜಾ ಪ್ರತಿನಿಧಿ ಕಾಯಿದೆಯನ್ನೂ ಪರಾಮರ್ಶಿಸಬೇಕಿದೆ.
- ನಾವೆಲ್ಲ ಲೋಕಾಯುಕ್ತಕ್ಕೆ ಆಸ್ತಿ ವಿವರ ಸಲ್ಲಿಸುತ್ತೇವೆ. ಆದರೆ ಕೊಡದೇ ಇದ್ದರೆ ಏನೂ ಆಗುವುದಿಲ್ಲ. ಹೀಗಾಗಿ ಲೋಕಾಯುಕ್ತ ವ್ಯವಸ್ಥೆಯನ್ನು ಬಲಪಡಿಸುವ ಜವಾಬ್ದಾರಿ ನಿಮ್ಮ ಮೇಲಿದೆ. ಚುನಾವಣಾ ಆಯೋಗಕ್ಕೆ ನಾವು ಸಲ್ಲಿಸಿದ ಆಸ್ತಿ ವಿವರ ಎಲ್ಲಿಂದ ಬಂತು ಎಂದು ಅವರು ಇದುವರೆಗೆ ಕೇಳಿಲ್ಲ. ಹೀಗಾಗಿ ಜನರಿಗೆ ವಂಚನೆ ಮಾಡುವ ಇಂಥ ಕಾನೂನುಗಳ ಹಣೆಬರಹವನ್ನು ಬೆತ್ತಲೆ ಮಾಡಬೇಕು.
- ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸ್ಥಾನ ದೊಡ್ಡದು, ನಾವು ಸಣ್ಣವರು. ಸಾಂದರ್ಭಿಕವಾಗಿ ನಾವು ಸ್ಥಾನ ಏರಬಹುದು. ಆದರೆ ಅದಕ್ಕೆ ಅಪಚಾರವಾಗದಂತೆ ನಡೆದುಕೊಳ್ಳಬೇಕಾಗುತ್ತದೆ.
- ಮಾಧ್ಯಮಗಳಿಗೂ ಪ್ರೀತಿಯ ವಂದನೆ. ಸಾರ್ವಜನಿಕ ಜೀವನದಲ್ಲಿ ವೈಯಕ್ತಿಕ ವಿಚಾರವನ್ನು ರೋಚಕತೆಯ ವಸ್ತುವಾಗಿಸಬೇಡಿ ಎಂದಷ್ಟೇ ನಾನು ನಿಮಗೆ ಸಲಹೆ ಕೊಡುತ್ತೇನೆ.
- ಈ ಹುದ್ದೆ ದೊಡ್ಡ ಗೌರವ ನೀಡಿದೆ. ಬದಲಾದ ಪರಿಸ್ಥಿತಿಯಲ್ಲಿ ಈ ಕ್ಷಣದಿಂದ ಹುದ್ದೆಗೆ ರಾಜೀನಾಮೆ ಕೊಡುತ್ತಿದ್ದೇನೆ ಎಂದು ಹೇಳಿದರು.

## ಇದು ಅಧಿಕೃತ, ರಾಜ್ಯದಲ್ಲಿ 17 ಅಸೆಂಬ್ಲಿ ಸ್ಥಾನ ಖಾಲಿ

**ಬೆಂಗಳೂರು:** ರಾಜ್ಯ ವಿಧಾನಸಭೆಯ 224 ಸ್ಥಾನಗಳ ಪೈಕಿ 17 ಅನ್ನು ಖಾಲಿ ಎಂದು ಅಧಿಕೃತವಾಗಿ ಘೋಷಿಸಿ ಗೆಜೆಟ್ ಅಧಿಸೂಚನೆ ಹೊರಡಿಸಲಾಗಿದೆ. ಜೆಡಿಎಸ್‌ನ ಮೂವರು, ಕಾಂಗ್ರೆಸ್‌ನ 13 ಮಂದಿ ಹಾಗೂ ಒಬ್ಬ ಪಕ್ಷೇತರ ಶಾಸಕರನ್ನು ವಿಧಾನಸಭಾ ಸದಸ್ಯತ್ವದಿಂದ ಅನರ್ಹಗೊಳಿಸಿದ ಹಿನ್ನೆಲೆಯಲ್ಲಿ ಅವರು ಪ್ರತಿನಿಧಿಸುತ್ತಿದ್ದ ಕ್ಷೇತ್ರಗಳನ್ನು ಖಾಲಿ ಎಂದು ಘೋಷಿಸಲಾಗಿದೆ. ರಾಣೆಬೆನ್ನೂರು, ಗೋಕಾಕ್, ಅಥಣಿ, ಕಾಗವಾಡ, ಹುಣಸೂರು, ಕೆ.ಆರ್.ಪೇಟೆ, ಮಹಾಲಕ್ಷ್ಮಿ ಲೇಔಟ್, ಮಸ್ಕಿ, ಹಿರೇಕೆರೂರು, ಯಲ್ಲಾಪುರ, ಯಶವಂತಪುರ, ಕೆ.ಆರ್.ಪುರ, ವಿಜಯನಗರ, ಶಿವಾಜಿನಗರ, ರಾಜರಾಜೇಶ್ವರಿನಗರ, ಚಿಕ್ಕಬಳ್ಳಾಪುರ ಹಾಗೂ ಹೊಸಕೋಟೆ ಕ್ಷೇತ್ರಗಳನ್ನು ಖಾಲಿ ಎಂದು ಘೋಷಿಸಿ ಚುನಾವಣಾ ಆಯೋಗಕ್ಕೆ ಮಾಹಿತಿ ನೀಡಲಾಗಿದೆ.

2